ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 102-107
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಚನ ಸಾಹಿತ್ಯ: ಲಿಂಗಸಮಾನತೆ, ಜಾತ್ಯತೀತತೆ, ಸಾಮಾಜಿಕ ಮೌಲ್ಯಗಳು

**ಇಂದಿರಾ ಪ. ಹೋಳಕರ**

ಕನ್ನಡ ಉಪನ್ಯಾಸಕರು, ಆರ್.ಪಿ. ಡಿ. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಟಿಳಕವಾಡಿ, ಬೆಳಗಾವಿ

***Abstract:***

*ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಅಮೂಲ್ಯ ಪರಂಪರೆಯಾಗಿದ್ದು, ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳನ್ನು ಪ್ರತಿಪಾದಿಸುತ್ತದೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಸೇರಿದಂತೆ ವಚನಕಾರರು ಲಿಂಗಸಮಾನತೆ, ಜಾತ್ಯಾತೀತತೆ ಮತ್ತು ಶ್ರಮದ ಗೌರವವನ್ನು ಸಮಾಜದ ಮೂಲ ಮೌಲ್ಯಗಳಾಗಿ ಪ್ರತಿಪಾದಿಸಿದ್ದಾರೆ. ಈ ಲೇಖನವು ವಚನಗಳಲ್ಲಿ ಅಡಕವಾಗಿರುವ ಮಹಿಳಾ ಸಮಾನತೆ, ಜಾತಿ–ವರ್ಗ ಭೇದದ ವಿರೋಧ ಹಾಗೂ ಸಮಾನತೆಯ ಚಿಂತನೆಗಳನ್ನು ವಿಶ್ಲೇಷಿಸುತ್ತದೆ. ವಚನಗಳು ವ್ಯಕ್ತಿಯ ಮೌಲ್ಯವನ್ನು ಜನ್ಮದಿಂದಲ್ಲ, ಗುಣ ಮತ್ತು ಕಾಯಕದಿಂದ ನಿರ್ಧರಿಸುತ್ತವೆ ಎಂಬ ಸಂದೇಶವನ್ನು ಸಾರುತ್ತವೆ. ಸಾಮಾಜಿಕ ಸಾಮರಸ್ಯ, ಸಹಬಾಳ್ವೆ ಮತ್ತು ನೈತಿಕ ಜೀವನದ ಮಹತ್ವವನ್ನು ವಚನಗಳು ಒತ್ತಿಹೇಳುತ್ತವೆ. ಇಂದಿನ ಸಮಾಜದಲ್ಲಿ ಲಿಂಗಭೇದ, ಜಾತಿ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆಗಳನ್ನು ನಿವಾರಿಸಲು ವಚನ ಸಾಹಿತ್ಯದ ತತ್ವಗಳು ಪ್ರಸ್ತುತವೂ, ಮಾರ್ಗದರ್ಶಕವೂ ಆಗಿದೆ. ಆದ್ದರಿಂದ, ವಚನ ಸಾಹಿತ್ಯವು ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಆಧಾರಿತ ಸಮಾಜ ನಿರ್ಮಾಣಕ್ಕೆ ಶಾಶ್ವತ ಪ್ರೇರಣೆಯಾಗಿದೆ.*

***Keywords:*** *ವಚನ ಸಾಹಿತ್ಯ, ಲಿಂಗಸಮಾನತೆ, ಜಾತ್ಯಾತೀತತೆ, ಸಾಮಾಜಿಕ ಮೌಲ್ಯಗಳು, ಬಸವ ತತ್ವಗಳು*

## ಪೀಠಿಕೆ

ಕನ್ನಡ ಸಾಹಿತ್ಯವು ಅಪೂರ್ವ ಮತ್ತು ಅನನ್ಯವಾಗಿದೆ. ಡಾ. ರಂ. ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸಿರುವಂತೆ ಕನ್ನಡ ನುಡಿಯು ಸುಮಾರು 2000 ವರ್ಷಗಳಷ್ಟು ಹಾಗೂ ಸಾಹಿತ್ಯವು 1500 ವರ್ಷಗಳಷ್ಟು ಸುದೀರ್ಘವಾದ ಇತಿಹಾಸವನ್ನು ಹೊಂದಿದೆ. ಅಧ್ಯಯನದ ಅನುಕೂಲಕ್ಕಾಗಿ ಕನ್ನಡ ಸಾಹಿತ್ಯವನ್ನು ವಿಭಾಗ ಮಾಡಿಕೊಳ್ಳಬಹುದಾಗಿದೆ. ಈ ವಿಭಾಗಗಳ ಕುರಿತು ನಾನಾ ವಿದ್ವಾಂಸರು ತಮ್ಮ ವಿಭಿನ್ನ ಅಭಿಪ್ರಾಯಗಳನ್ನು ಮುಂದಿಟ್ಟಿದ್ದಾರೆ. ಆದರೆ ಯಾರ ವಿಭಾಗ ಕ್ರಮವೂ ಪರಿಪೂರ್ಣವಲ್ಲ. ಒಂದು ವಿಭಾಗ ಕ್ರಮವನ್ನು ಉಲ್ಲೇಖಿಸುವುದಾದರೆ ಪಂಪಪೂರ್ವ ಸಾಹಿತ್ಯ, ಪ್ರಾಚೀನ ಕನ್ನಡ ಸಾಹಿತ್ಯ, ಮಧ್ಯಕಾಲೀನ ಅಥವಾ ನಡುಗನ್ನಡ ಸಾಹಿತ್ಯ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಎಂಬವು. ಈ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಆಯಾ ಕಾಲಘಟ್ಟಗಳಲ್ಲಿ ನಾನಾ ಸ್ವರೂಪಗಳ ಮೂಲಕ ಹರಿದು ಬಂದಿರುವುದನ್ನು ನಾವು ಗಮನಿಸಬಹುದಾಗಿದೆ.

ಪಂಪ ಪೂರ್ವ ಸಾಹಿತ್ಯದಲ್ಲಿ ಒನಕೆವಾಡು, ಓವನಿಗೆ, ಬೆದಂಡೆ, ಚತ್ತಾಣ ಮೊದಲಾದ ಪ್ರಕಾರಗಳು ಅದೇ ರೀತಿಯಾಗಿ ಪ್ರಾಚೀನ ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಚಂಪೂ, ಕಂದ, ಗದ್ಯ

***Please cite this article as:*** ಇಂದಿರಾ ಪ. ಹೋಳಕರ. (2026). ವಚನ ಸಾಹಿತ್ಯ: ಲಿಂಗಸಮಾನತೆ, ಜಾತ್ಯತೀತತೆ, ಸಾಮಾಜಿಕ ಮೌಲ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಆಂಡ್ ಡೆವಲಪ್‌ಮೆಂಟ್*, 5(3), 102–107

ಮತ್ತು ಮಧ್ಯಕಾಲೀನ ಅಥವಾ ನಡುಗನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ವಚನ, ಷಟ್ಪದಿ, ತ್ರಿಪದಿ, ರಗಳೆ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಥೆ, ಕಾದಂಬರಿ, ನಾಟಕ, ಭಾವಗೀತೆ ಹೀಗೆ ನಾನಾ ಸಾಹಿತ್ಯ ಪ್ರಕಾರಗಳನ್ನು ಕಾಣುತ್ತೇವೆ. ಮಧ್ಯಕಾಲೀನ ಅಥವಾ ನಡುಗನ್ನಡ ಸಾಹಿತ್ಯ ಸಂದರ್ಭವನ್ನು ಗಮನಿಸಿದರೆ ನಮ್ಮ ಕಣ್ಣ ಮುಂದೆ ಬಂದು ನಿಲ್ಲುವುದು ವಚನ ಸಾಹಿತ್ಯ. ಈ ಸಂದರ್ಭದಲ್ಲಿ ವಚನ ಸಾಹಿತ್ಯ ಮುಖ್ಯ ಸಾಹಿತ್ಯ ಪ್ರಕಾರವಾಗಿ ವಿಶಿಷ್ಟವಾದ ಸ್ವರೂಪದಲ್ಲಿ ಕಂಡು ಬಂದಿದೆ.

"ವಚನ" ಎಂದರೆ ಸಾಮಾನ್ಯವಾಗಿ ಪ್ರತಿಜ್ಞೆ, ಮಾತು, ನುಡಿ ಹೀಗೆಲ್ಲಾ ಹೇಳುತ್ತೇವೆ. ಆದರೆ ಸಾಹಿತ್ಯಿಕವಾಗಿ ಇದು ವಿಶಾಲಾರ್ಥವನ್ನು ಹೊಂದಿದೆ. "ವಚನ" ಎಂದರೆ ಗದ್ಯವೂ ಅಲ್ಲದ, ಪದ್ಯವೂ ಅಲ್ಲದ ಸರಳವಾದ ರಚನೆಗಳು. ವಚನ ಹಾಡಿದರೆ ಪದ್ಯವಾಗುತ್ತದೆ, ಓದಿದರೆ ಗದ್ಯವಾಗುತ್ತದೆ. ವಚನ ಶರಣರ ಸೂಳ್ನುಡಿ, ಜನಸಾಮಾನ್ಯರ ಧ್ವನಿ. ಒಂದು ಕಾಲದಲ್ಲಿ ಚಂಪೂ ಕೃತಿಗಳ ಗದ್ಯವನ್ನು 'ವಚನ'ಎಂದು ಕರೆಯುತ್ತಿದ್ದರು. ಆದರೆ 12–13ನೆಯ ಶತಮಾನಗಳಲ್ಲಿದ್ದ ಶಿವಶರಣರು ವಚನ ಎಂದು ಕರೆದಿದ್ದು ಚಂಪೂವಿನ ಗದ್ಯಕ್ಕಿಂತ ಭಿನ್ನವಾದ ರಚನೆಯನ್ನು. ಡಾ.ಎಂ ಎಂ ಕಲಬುರ್ಗಿ ಅವರ ಪ್ರಕಾರ, "ವಚನ ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯ ಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದರ್ಥ. ನಡೆ ಹೇಗೇ ಇರಲಿ ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ ವಚನವೆನಿಸುತ್ತದೆ".

ವಚನ ಸಾಹಿತ್ಯಕ್ಕೆ ಸುಮಾರು 800 ವರ್ಷಗಳ ಇತಿಹಾಸವಿದೆ. ಇದು 12 ನೆಯ ಶತಮಾನದಲ್ಲಿ ಹುಟ್ಟಿಕೊಂಡಿತು. ಇದಕ್ಕೂ ಮುಂಚಿನ ಸಾಹಿತ್ಯ ಅಂದರೆ ಸುಮಾರು 10 ನೆಯ ಶತಮಾನದಿಂದ 12ನೆಯ ಶತಮಾನದವರೆಗೆ ಇದ್ದ ಸಾಹಿತ್ಯವು ಸಂಸ್ಕೃತ ಮಿಶ್ರಿತ ಕನ್ನಡವಾಗಿತ್ತು, ಪಂಡಿತ ಪಾಮರರಿಗೆ ಮಾತ್ರ ಅರ್ಥವಾಗುವಂತಿತ್ತು. ಅದು ಜನ ಸಾಮಾನ್ಯರ ಕೈಗೆ ನಿಲುಕದ ಭಾಷೆಯಾಗಿತ್ತು. ಹೀಗಾಗಿ ಸಾಹಿತ್ಯದ ಉದ್ದೇಶ ಈಡೇರದೆ ಸಮಾಜವು ನಾನಾ ಸಮಸ್ಯೆಗಳ ಆಗರವಾಗಿತ್ತು. ಜಾತಿ, ಮತ, ಪಂಥ, ಲಿಂಗ ತಾರತಮ್ಯ, ಬಡತನ, ಮೂಢನಂಬಿಕೆ ಮೊದಲಾದ ಸಮಸ್ಯೆಗಳು ಪಿಡುಗುಗಳಾಗಿ ಸಮಾಜವನ್ನು ಬಿಡದೆ ಕಾಡುತ್ತಿದ್ದವು. ಇವುಗಳನ್ನು ಪರಿಹರಿಸಿ ಸಮಾಜದಲ್ಲಿ ಪರಿವರ್ತನೆ ತರುವುದು ಅನಿವಾರ್ಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಜನಸಾಮಾನ್ಯರ ನುಡಿಯಾಗಿ, ನಡೆಯಾಗಿ, ಧ್ವನಿಯಾಗಿ ವಚನ ಸಾಹಿತ್ಯ ಒಂದು ಚಳುವಳಿಯಾಗಿ ಹುಟ್ಟಿಕೊಂಡಿತು. ಈ ಅವಧಿಯಲ್ಲಿ ವೀರಶೈವ ಧರ್ಮದ ಪ್ರಭಾವ ಅತಿಯಾಗಿದ್ದರೂ ಬಸವಾದಿ ಶರಣರ ಉದ್ದೇಶ ಕೇವಲ ಧಾರ್ಮಿಕ ಅಭಿವೃದ್ಧಿಯಾಗಿರಲಿಲ್ಲ. ಧಾರ್ಮಿಕ ಅಭಿವೃದ್ಧಿಯ ಜೊತೆಗೆ ಸಾಮಾಜಿಕ ಕಲ್ಯಾಣ ಹಾಗೂ ಆತ್ಮೋನ್ನತಿಯಾಗಿತ್ತು. ವಚನ ಸಾಹಿತ್ಯ ಸಾಮಾಜಿಕ ಪಿಡುಗುಗಳಿಗೆ ಔಷಧಿಯಾಗಿ ಹುಟ್ಟಿಕೊಂಡಿತು.

ವಚನ ಸಾಹಿತ್ಯದ ನೇತಾರ ಬಸವಣ್ಣನವರು ಸಮಾಜೋದ್ಧಾರಕೆ ಅನುಭವ ಮಂಟಪವನ್ನು ಕಟ್ಟಿ, ಜ್ಞಾನಿಯಾದ ಅಲ್ಲಮಪ್ರಭುವನ್ನು ಅದರ ಅಧ್ಯಕ್ಷನನ್ನಾಗಿ ಮಾಡಿ, ಜಾತಿ, ಮತ, ಪಂಥ, ಲಿಂಗ, ಧರ್ಮ ಎಂದು ಯಾವುದೇ ರೀತಿಯ ತಾರತಮ್ಯ ಮಾಡದೆ ಸರ್ವರೂ ಸಮಾನರು ಎಂಬ ನಿಟ್ಟಿನಲ್ಲಿ ಸರ್ವರಿಗೂ ಮುಕ್ತವಾಗಿ ಚರ್ಚಿಸಲು , ಚಿಂತನ ಮಂಥನ ನಡೆಸಲು ಅವಕಾಶ ಮಾಡಿಕೊಟ್ಟರು. ಅಲ್ಲಮಪ್ರಭು, ಸಿದ್ಧರಾಮ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ ಮೊದಲಾದ ಶರಣರು ಅಕ್ಕಮಹಾದೇವಿ, ಸೂಳೆ ಸಂಕವ್ವೆ, ಮೋಳಿಗೆ ಮಹಾದೇವಿ, ಗೊಗ್ಗವ್ವೆ, ಪುಣ್ಯಸ್ತ್ರೀ ಕಾಳವ್ವೆ, ಮುಕ್ತಾಯಕ್ಕ, ಗಂಗಾಂಬಿಕೆ, ನೀಲಾಂಬಿಕೆ ಮೊದಲಾದ ಶಿವಶರಣೆಯರು ಅದರ ಸದಸ್ಯರಾದರು.

ವಚನ ಸಾಹಿತ್ಯ ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿಯಾಗಿ ವ್ಯಾಪಕವಾಗಿ ವಿಸ್ತರಿಸಿದ ಒಂದು ಅಪೂರ್ವ ಘಟನೆ. ವಚನಗಳ ಸೃಷ್ಟಿ ಒಂದು ವಿಶಿಷ್ಠ ಪ್ರಯೋಗವೆಂದೇ ಹೇಳಬಹುದು. ಜನಸಮಾನ್ಯರ ಧ್ವನಿಯಾಗಿ ಆತ್ಮ ಕಲ್ಯಾಣದ ಜೊತೆಗೆ ಸಾಮಾಜಿಕ ಕಲ್ಯಾಣಕ್ಕಾಗಿ ಶ್ರಮಿಸಿದ ಸಾಹಿತ್ಯವೆಂದರೆ ಅದು "ವಚನ ಸಾಹಿತ್ಯ". ಈ ಸಾಹಿತ್ಯ ಜನಸಾಮಾನ್ಯರಿಗೆ ತುಂಬಾ ಹತ್ತಿರವಾಗಲು ಕಾರಣ ಶರಣರ ಸೂಳ್ನುಡಿಗಳು, ಅನುಭಾವದ ನುಡಿಗಳು, ಸಹಜವಾಗಿ, ಸರಳವಾಗಿ ಮೂಡಿಬಂದ ಶರಣರ ನುಡಿಗಳು ಇಂದಿಗೂ ಪ್ರಸ್ತುತ. ಇವರು ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದಬಯಸಿದರು. ಸಮಾನತೆಯ ಆಧಾರದ ಜಾತ್ಯತೀತತೆ ಮತ್ತು ಸಾಮಾಜಿಕ ಮೌಲ್ಯಗಳನ್ನೊಳಗೊಂಡ ಹೊಸ ಸಮಾಜವನ್ನು ಕಟ್ಟಬಯಸಿದರು.

**ವಚನಗಳು–ಲಿಂಗ ಸಮಾನತೆ**

ಬಸವಾದಿ ಶರಣರ ಕಾಲದಲ್ಲಿ ಎಂದರೆ 12 ನೆಯ ಶತಮಾನದಲ್ಲಿ ಲಿಂಗ ತಾರತಮ್ಯವು ಒಂದು ಸಾಮಾಜಿಕ ಸಮಸ್ಯೆಯಾಗಿ ಸಮಾಜವನ್ನು ಕಾಡುತ್ತಿತ್ತು. ವೈದಿಕ ವರ್ಣಾಶ್ರಮ ವ್ಯವಸ್ಥೆ ಹಾಗೂ ಪಿತೃ ಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀ–ಯನ್ನು ಶೋಷಿಸುವುದನ್ನು ಕಂಡ ಶರಣರು ಸ್ತ್ರಿ–ಪುರುಷರಿಬ್ಬರೂ ಸಮಾನರು ಎನ್ನುವ ಧ್ವನಿಯನ್ನೊಳಗೊಂಡ ಸಮಾಜವನ್ನು ಕಟ್ಟ ಬಯಸಿದರು. ಈ ಭಾವವನ್ನು ಶರಣರ ಕೆಲವೊಂದು ವಚನಗಳಲ್ಲಿ ಗಮನಿಸಬಹುದು.

***"ಮೊಲೆ ಮೂಡಿ ಬಂದಡೆ ಹೆಣ್ಣೆಂಬರು***
***ಮೀಸೆ ಕಾಸೆ ಬಂದಡೆ ಗಂಡೆಂಬರು***
***ನಡುವೆ ಸುಳಿವಾ ಆತ್ಮನು***
***ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥಾ***

(ಜೇಡರ ದಾಸಿಮಯ್ಯ)

ಸ್ವರೂಪದಲ್ಲಿ ಹೆಣ್ಣು–ಗಂಡೆಂಬ ವಿಭಿನ್ನತೆ ಇದೆ. ಆದರೆ ಆತ್ಮ ಒಂದೇ. ಆತ್ಮಕ್ಕೆ ಯಾವ ಲಿಂಗವೂ ಇಲ್ಲ ಎನ್ನುವುದರ ಮೂಲಕ ಸ್ತ್ರಿ–ಪುರುಷ ಸಮಾನತೆಯ ಬೀಜವನ್ನು ಬಿತ್ತುವಂತ ಕೆಲಸವನ್ನು ವಚನಕಾರರಲ್ಲಿ ಕಾಣುತ್ತೇವೆ. ಅದೇ ರೀತಿಯಾಗಿ ಶಿವಶರಣೆ ಗೊಗ್ಗವ್ವೆಯ ವಚನವನ್ನು ಗಮನಿಸುವುದಾದರೆ,,,

***"ಮೊಲೆ ಮೂಡಿ ಬಂದರೆ ಹೆಣ್ಣೆಂಬರು***
***ಮೀಸೆ ಕಾಸೆ ಬಂದರೆ ಗಂಡೆಂಬರು***
***ಈ ಉಭಯ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥ?"***

(ಗೊಗ್ಗವ್ವೆ)

ಎಂದು ಪ್ರಶ್ನಿಸುತ್ತ ಸ್ವರೂಪದಲ್ಲಿ ಮಾತ್ರ ಭಿನ್ನತೆಯನ್ನು ಕಾಣುತ್ತೇವೆ ಆದರೆ ಜ್ಞಾನಕ್ಕೆ ಹೆಣ್ಣು ಗಂಡೆಂಬ ಯಾವ ಭೇದವೂ ಇಲ್ಲ ಎನ್ನುತ್ತಾಳೆ. ಹೀಗೆ ಅನೇಕ ಶಿವಶರಣರು, ಶಿವಶರಣೆಯರು ವಚನಗಳಲ್ಲಿ ಸ್ತ್ರೀ–ಪುರುಷ ಸಮಾನತೆಯ ಭಾವವನ್ನು ಅಭಿವ್ಯಕ್ತಗೊಳಿಸಿದ್ದಾರೆ.

**ವಚನಗಳು–ಜಾತ್ಯಾತೀತತೆ**

ಜಾತಿ, ಮತ, ಪಂಥ, ವರ್ಣ ಎಂಬ ಭೇದಭಾವ ಮಾಡದೆ ಎಲ್ಲರೂ ಒಂದೇ ಎಂಬ ಭಾವವನ್ನು ಹೊಂದಿರುವುದೇ ಜಾತ್ಯಾತೀತ. ಮಾನವನು ಹುಟ್ಟುತ್ತಾ ಯಾವ ಜಾತಿಯ ಗುರುತನ್ನು ತಂದಿರುವುದಿಲ್ಲ. ಆದರೆ ಹೋಗುವಾಗ ಈ ಭೇದಭಾವವೇಕೆ? ಹರಿಯುವ ನೀರು, ಬೀಸುವ ಗಾಳಿಗಿಲ್ಲದ ಜಾತಿ ಮಾನವನಿಗೇಕೆ? ಮಾನವ ಪ್ರಕೃತಿಯ ಕೂಸು, ಪ್ರಕೃತಿಗೆ ಇರದ ತಾರತಮ್ಯ ಮಾನವನಿಗೇಕೆ ಬೇಕು? ಜೀವದ, ಜ್ಞಾನದ ಮುಂದೆ ಎಲ್ಲವೂ ಶೂನ್ಯ. ಶಿವಶರಣರು ವರ್ಗ ಭೇದವಿಲ್ಲದ, ವರ್ಣಭೇದವಿಲ್ಲದ ಸಮಾಜವನ್ನು ಕಟ್ಟಲು ಜೀವನದುದ್ದಕ್ಕೂ ಹೋರಾಡಿದರು ಎನ್ನುವುದಕ್ಕೆ ಶರಣರ ವಚನಗಳೇ ಸಾಕ್ಷಿ.

ಪರಂಪರೆಯಿಂದ ಬಂದ ಜಾತಿ ಅಥವಾ ಕುಲದ ಪ್ರಶ್ನೆಯ ಬಗೆಗೆ ಶಿವಶರಣರು ಸಾಕಷ್ಟು ವಿಚಾರ ಮಾಡಿರುವರು. ಇವರು ಜಾತಿ ರಹಿತ ಸಮಾಜ ನಿರ್ಮಾಣ ಮಾಡ ಹೊರಟರು. ಇದನ್ನು ಅವರ ಸೂಳ್ನುಡಿಗಳಲ್ಲಿ ಕಾಣಬಹುದಾಗಿದೆ.

ಎಂ. ಎಂ. ಕಲಬುರ್ಗಿ ಅವರು, "ಭಾರತವು ವರ್ಗಭೇದ, ವರ್ಣಭೇದ, ಲಿಂಗ ತಾರತಮ್ಯ ಹೀಗೆ ಭೇದ ಸಂಸ್ಕೃತಿಯ ರಾಷ್ಟ್ರವಾಗಿದೆ. ಭೇದ ಸಂಸ್ಕೃತಿಯ ಸಮಾಜದಲ್ಲಿ ಪರಸ್ಪರ ಘರ್ಷಣೆಗಳು ಜರುಗಬಹುದೇ ಹೊರತು ಸಾಮುದಾಯಿಕ ಆಂದೋಲನ ಜರುಗಲಾರದು. ಹೀಗಾಗಿ ನಮ್ಮ ದೇಶದಲ್ಲಿ ಆತ್ಮ ಕಲ್ಯಾಣದ ಪ್ರಯೋಗವು ಜರುಗದ ಹೊರತು ಸಮಾಜ ಕಲ್ಯಾಣದ ಆಂದೋಲನಗಳು ಸಂಭವಿಸಿಲ್ಲ. ಶರಣರು ಈ ಎರಡೂ ಬಗೆಯ ಕಲ್ಯಾಣದ ವಿಷಯವಾಗಿ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವರ ಮಾತಿನ ಆಧಾರದಲ್ಲಿ ಶರಣರು ಸಮಾಜ ಕಲ್ಯಾಣದ ಜೊತೆಗೆ ಆತ್ಮ ಕಲ್ಯಾಣವನ್ನೂ ಬಯಸಿದರು ಎಂಬುದು ಮನದಟ್ಟಾಗುತ್ತದೆ. ಸಮಾಜ ಕಲ್ಯಾಣಕ್ಕೆ ಉಚ್ಚ–ನೀಚ, ಶ್ರೇಷ್ಠ–ಕನಿಷ್ಠ ಎಂಬ ಭಾವಗಳು ನಿರ್ಮೂಲನಗೊಳ್ಳಬೇಕು ಎಂಬುದನ್ನು ಅರಿತ ಶರಣರು ಜಾತಿ ಸಮಾನತೆಗಾಗಿ ಶ್ರಮಿಸಿದರು. ಈ ನಿಟ್ಟಿನಲ್ಲಿ ಸಿದ್ಧರಾಮನ ವಚನಗಳನ್ನು ಅವಲೋಕಿಸುವುದಾದರೆ "ಕುಲದಲ್ಲಿ ಶೂದ್ರನಾದಡೇನು? ಮನದಲ್ಲಿ ಮಹಾದೇವ ನೆಲೆಗೊಂಡವನೆ ವೀರಶೈವ ನೋಡಾ", "ಆವ ಯೋನಿಜನಾದಡೇನು ನೀನೊಲಿದವನೆ ಕುಲಜನಯ್ಯಾ" ಎನ್ನುವಲ್ಲಿ ಕುಲ ಮುಖ್ಯವಲ್ಲ ಭಕ್ತಿ ಮುಖ್ಯ ಎಂಬುದು ಅಭಿವ್ಯಕ್ತಗೊಂಡಿದೆ.

***"ಕುಲವೆಂದು ಹೋರಾಡುವ ಅಣ್ಣಗಳಿರಾ,***
***ಕೇಳಿರೋ ಕುಲವೇ ಡೋಹಾರನ?***
***ಕುಲವೇ ಮಾದಾರನ?***
***ಕುಲವೇ ವಾಲ್ಮೀಕನ?***
***ಕುಲವೇ ಕೌಂಡಿಲ್ಯನ?***
***ಕುಲವ ನೋಳ್ಪಡೆ ಹುರುಳಿಲ್ಲ***
***ಅವರ ನಡೆಯ ನೋಲ್ಪಡೆ ನಡೆಯುವವರು ತ್ರಿಲೋಕದಲ್ಲಿಲ್ಲ ನೋಡಾ."***

(ಸಿದ್ಧರಾಮ)

ನಡೆಗೆ, ಜ್ಞಾನಕ್ಕೆ ಯಾವ ಕುಲವೂ ಇಲ್ಲ ಎಂಬುವುದನ್ನು ಮೇಲಿನ ವಚನಗಳು ಅಭಿವ್ಯಕ್ತಗೊಳಿಸುತ್ತವೆ. ಅಂಬಿಗರ ಚೌಡಯ್ಯನ ವಚನದ ಸಾಲುಗಳಾದ,,,,

***"ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ***
***ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು***
***ಅಕ್ಕಿ ಕಣಕವ ಕೊಂಡು ಹೋಗುವ ಗುರುವಿನ ಕಂಡೊಡೆ***
***ಕೆಡವಿ ಹಾಕಿ ಮೂಗನೆ ಕೊಯ್ದು***
***ಇಟ್ಟಂಗಿಯ ಕಲ್ಲಲೇ ಇಕ್ಕಿ***
***ಸಾಸಿವೆ ಹಿಟ್ಟನು ತಳಿದು***
***ಮೇಲೆ ಲಿಂಬಿಯ ಹುಳಿಯನೆ ಹಿಂಡಿ***
***ಪಡುವಣ ಗಾಳಿಗೆ ಹಿಡಿ ಎಂದಾತ***
***ನಮ್ಮ ಅಂಬಿಗರ ಚೌಡಯ್ಯ"***

(ಅಂಬಿಗರ ಚೌಡಯ್ಯ)

ಜಾತಿಯ ಆಧಾರದ ಮೇಲೆ ಭೇದಭಾವವನ್ನು ಮಾಡುವ ಗುರುವನ್ನು ಕಂಡೊಡೆ ಮೇಲಿನಂತೆ ಶಿಕ್ಷಿಸಬೇಕು, ಸಮಾಜದಲ್ಲಿ ಭೇದಭಾವ ತೊರೆದು ಜಾತ್ಯಾತೀತ ಭಾವವನ್ನು ಬೆಳೆಯಬೇಕು ಎಂಬ ಧ್ವನಿ ಮೇಲಿನ ವಚನದ ಸಾಲುಗಳಲ್ಲಿ ಅಡಗಿದೆ.

***"ಕೊಲುವವನೇ ಮಾದಿಗ***
***ಹೊಲಸು ತಿಂಬುವನೇ ಹೊಲೆಯ***
***ಕುಲವೇನೋ ಆವಂದಿರ ಕುಲವೇನೋ***
***ಸಕಲ ಜೀವಾತ್ಮರಿಗೆ ಲೇಸನೇ ಬಯಸುವ***
***ನಮ್ಮ ಕೂಡಲ ಸಂಗನ ಶರಣರೆ ಕುಲಜರು"***

(ಬಸವಣ್ಣ)

ಅನೀತಿಯ ಮಾರ್ಗ ಹಿಡಿದವನೇ ಹೊಲೆಯ. ಧರ್ಮದ ಹಾದಿಯಲ್ಲಿ ನಡೆಯುವವರಿಗೆ ಯಾವುದೇ ಕುಲವಿಲ್ಲ. ಸರ್ವರಿಗೂ ಹಿತವನ್ನು ಬಯಸುವವರೇ ಕುಲಶ್ರೇಷ್ಠರು ಎನ್ನುವ ಭಾವವು ವಚನ ಸಾಹಿತ್ಯದ ಯುಗಪುರುಷ ಬಸವಣ್ಣವರ ವಚನದ ಸಾಲುಗಳಲ್ಲಿ ಅಭಿವ್ಯಕ್ತಗೊಂಡಿದೆ.

**ವಚನಗಳು–ಸಾಮಾಜಿಕ ಮೌಲ್ಯಗಳು**

"ಮೌಲ್ಯ" ಎಂದರೆ ಗುಣ, ನೀತಿ, ಹಿತ, ಒಳ್ಳೆಯದು ಎಂದು ಅರ್ಥೈಸಬಹುದು. ಮೌಲ್ಯಗಳನ್ನು ಸಾಮಾಜಿಕ ಮೌಲ್ಯಗಳು, ಧಾರ್ಮಿಕ ಮೌಲ್ಯಗಳು, ನೈತಿಕ ಮೌಲ್ಯಗಳು ಮೊದಲಾದ ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಪರಿಸರ, ಕಾಲ, ಸಂದರ್ಭ, ಅವಸ್ಥೆ, ಅನುಕೂಲ, ಅನಾನುಕೂಲ ಇವುಗಳ ಮೇಲೆ ಮೌಲ್ಯಗಳು ಸೃಷ್ಟಿಯಾಗುತ್ತವೆ.

ಸಾಮಾಜಿಕ ಮೌಲ್ಯಗಳೆಂದರೆ ತನ್ನಂತೆ ಪರರು ಎಂದು ಭಾವಿಸಿ ನಡೆಯುವ ಜೀವ ವಿಧಾನ. ಉದಾ: ಸಹಕಾರ, ಹೊಂದಾಣಿಕೆ, ತ್ಯಾಗ, ಸಮಾನತೆ, ಮಾನವೀಯತೆ ಇತ್ಯಾದಿಗಳನ್ನು ಅನುಸರಿಸುವ ನಡೆಯು ಸಾಮಾಜಿಕ ಮೌಲ್ಯದ್ದಾಗಿರುತ್ತದೆ. ಇಂತಹ ಮೌಲ್ಯಗಳನ್ನು ಸಮಾಜದಲ್ಲಿ ಬಿತ್ತುವ ಕಾರ್ಯವನ್ನು ವಚನಕಾರರು ಮಾಡಿದ್ದಾರೆ ಎನ್ನುವುದಕ್ಕೆ ಕೆಲವು ವಚನಕಾರರ ವಚನಗಳನ್ನು ನೆನಪಿಸಿಕೊಳ್ಳಬಹುದು.

***"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,***
***ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,***
***ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,***
***ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ***
***ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ."***

(ಬಸವಣ್ಣ)

ನಿರ್ಮಲ ಚಿತ್ತದಿಂದ ಕೂಡಿದ ಮನುಷ್ಯ ಹೇಗಿರಬೇಕು? ಹೇಗೆ ನಡೆದುಕೊಳ್ಳಬೇಕು? ಯಾವ ಸದ್ಗುಣಗಳನ್ನು ಹೊಂದಬೇಕು? ಯಾವ ದುರ್ಗುಣಗಳನ್ನು ಬಿಡಬೇಕು? ಎಂಬುದನ್ನು ಬಸವಣ್ಣವರು ತಮ್ಮ ವಚನಗಳಲ್ಲಿ ತುಂಬಾ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಈ ಮೌಲ್ಯಗಳನ್ನೊಳಗೊಂಡವ ಅಂತರಂಗ ಮತ್ತು ಬಹಿರಂಗ ಎರಡೂ ಶುದ್ಧಿಯಾಗಿರುತ್ತದೆ. ಇದೇ ದೇವರನೊಲಿಸುವ ಪರಿಯಾಗಿರುತ್ತದೆ.

***"ಸತಿ–ಪತಿಯೆಂಬ ಅಂಗಸುಖ ಹಿಂಗಿ ಲಿಂಗವೇ ಪತಿಯಾದ ಬಳಿಕ***
***ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ?***
***ಪಾಲುಂಡು ಮತ್ತೆ ಮೇಲುಂಬರೆ ಗುಹೇಶ್ವರ."***

(ಅಲ್ಲಮಪ್ರಭು)

ವೇಶ್ಯಾವಾಟಿಕೆಯನ್ನು ಕಟುವಾಗಿ ತಿರಸ್ಕರಿಸುವ ಶರಣರು ನೈತಿಕ ಜೀವನಕ್ಕೆ ಮಹತ್ವ ನೀಡುತ್ತಾರೆ. ಅನೈತಿಕ ಮೌಲ್ಯಗಳಿಂದ ಕೂಡಿದ ಜೀವನವನ್ನು ತಿರಸ್ಕರಿಸಿ ಸಂಸಾರ ಹಾಗೂ ಸಮಾಜದಲ್ಲಿ ನೈತಿಕತೆ ಮತ್ತು ನೆಮ್ಮದಿಯನ್ನು ಉಂಟುಮಾಡುವ ದೃಷ್ಟಿಯಲ್ಲಿ ಅಲ್ಲಮಪ್ರಭುವಿನ ವಚನದ ಸಾಲುಗಳು ಮೂಡಿಬಂದಿವೆ.

***"ಲೋಕದ ಡೊಂಕ ನೀವೇಕೆ ತಿದ್ದುವಿರಿ?***
***ನಿಮ್ಮ ನಿಮ್ಮ ತನುವಸಂತೈಸಿಕೊಳ್ಳಿ***
***ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ***
***ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ***
***ಕೂಡಲಸಂಗಮದೇವ"*** (ಬಸವಣ್ಣ)

ನಮ್ಮ ನಮ್ಮ ತನು– ಮನವನ್ನು ಶುದ್ಧವಾಗಿಟ್ಟುಕೊಳ್ಳಬೇಕು. ನಂತರ ಪರರನ್ನು ತಿದ್ದುವ ಕಾರ್ಯಮಾಡಬೇಕು ಎಂಬ ಸಂದೇಶವನ್ನು ಬಸವಣ್ಣವರು ನೀಡಿದ್ದಾರೆ.

***"ಉಳ್ಳವರು ಶಿವಾಲಯವ ಮಾಡಿಹರು,***
***ನಾನೇನ ಮಾಡುವೆ ಬಡವನಯ್ಯಾ.***
***ಎನ್ನ ಕಾಲೇ ಕಂಬ, ದೇಹವೇ ದೇಗುಲ,***
***ಶಿರ ಹೊನ್ನ ಕಲಶವಯ್ಯಾ.***
***ಕೂಡಲಸಂಗಮದೇವಾ, ಕೇಳಯ್ಯಾ***
***ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ."***

(ಬಸವಣ್ಣ)

ಬಡವನಾದರೂ ಭಕ್ತಿ ಎಂತಹದ್ದಿರಬೇಕು ಎಂಬುದು ಮೇಲಿನ ವಚನದಿಂದ ಮನದಟ್ಟಾಗುತ್ತದೆ. ದೈವದ ಮುಂದೆ ನಮ್ಮ ಮೌಲ್ಯಯುತ ನಡವಳಿಕೆ ಮುಖ್ಯವಾಗಿರುತ್ತದೆ. ನಿರ್ಮಲ ಮನಸ್ಸಿನಲ್ಲಿ ಮಾತ್ರ ಉತ್ತಮ ಮೌಲ್ಯಗಳು ನೆಲೆಗೊಂಡಿರುತ್ತವೆ. ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂಬ ವಿಚಾರಗಳನ್ನು ಬಸವಣ್ಣವರು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದರು.

ಒಟ್ಟಿನಲ್ಲಿ ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತಾದ ವಚನ ಸಾಹಿತ್ಯ ಸಮಾಜದಲ್ಲಿ ಒಳ್ಳೆಯ ಮೌಲ್ಯಗಳನ್ನು ಬಿತ್ತಿ, ಜನಸಾಮಾನ್ಯರಿಗೆ ಅಭಿವ್ಯಕ್ತಿ ಸ್ವಾತಂತ್ರವನ್ನು ನೀಡಿ, ಸಮಾಜದಲ್ಲಿರುವ ಅಸಮಾನತೆಯ ಭಾವದ ವಿರುದ್ಧ ಹೋರಾಡುವ ಜನಸಾಮಾನ್ಯರ ಧ್ವನಿಯಾಗಿ, ಚಳುವಳಿಯಾಗಿ,ಜನಾಂದೋಲನವಾಗಿ ಮೂಡಿಬಂದಿತು. ವಚನಕಾರರ ವಚನಗಳು ಸಾಮಾಜಿಕ ಸಮಸ್ಯೆಗಳಿಗೆ ಔಷಧಿಯಾಗಿ, ಆತ್ಮ ಕಲ್ಯಾಣದ ಜೊತೆಗೆ ಸಮಾಜೋಧಾರ್ಮಿಕ ಅಭಿವೃದ್ಧಿಗೆ ಅಮೃತದ ನುಡಿಗಳಾಗಿ ಮೂಡಿಬಂದು ಜನಮಾನಸಕ್ಕೆ ಹತ್ತಿರದ ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ವಚನಕಾರರ ಕಾರ್ಯ ಅವಿಸ್ಮರಣೀಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಗುಂಜೆಟ್ಟಿ, ಬಿ.ವ್ಹಿ., ಈ.ಎಂ.ಹೆಗಡೆ., ಬಾಳಣ್ಣಾ ಸೀಗಿಹಳ್ಳಿ. (ಸಂ.) *ವಚನ ಸಾಹಿತ್ಯ ದರ್ಶನ.*
- ಕಲಬುರ್ಗಿ, ಎಂ.ಎಂ. (ಸಂ.) (1993). *ಬಸವಣ್ಣವರ ವಚನ ಸಂಪುಟ–1.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- ಮಲ್ಲಾಪುರ, ಬಿ.ವ್ಹಿ. (ಸಂ.) (1993). *ಅಲ್ಲಮಪ್ರಭುದೇವರ ಸಂಪುಟ–2.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- ಮಲ್ಲಾಪುರ, ಬಿ.ವ್ಹಿ. (ಸಂ.) (1993). *ಚನ್ನಬಸವಣ್ಣನವರ ವಚನ ಸಂಪುಟ–3.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- ಮುಗಳಿ, ರಂ.ಶ್ರೀ. (2018). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.
- ವೀರಣ್ಣ ರಾಜೂರ. (ಸಂ.) (1993). *ಶಿವಶರಣೆಯರ ವಚನ ಸಂಪುಟ.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- ವಿದ್ಯಾಶಂಕರ, ಎಸ್. (ಸಂ.) (1993). ಸಿದ್ಧರಾಮೇಶ್ವರ ವಚನ ಸಂಪುಟ–4. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.